# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **655** |
| ವಿಧಾನ ಪರಿಷತ್ತಿನ ಸದಸ್ಯರ ಹೆಸರು | : | ಶ್ರೀ ಮಂಜುನಾಥ್ ಭಂಡಾರಿ<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 11.12.2023 |
| ಉತ್ತರಿಸುವ ಸಚಿವರು | : | ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿ ಒಟ್ಟು ಎಷ್ಟು ತರಹದ ಪಡಿತರ ಚೀಟಿಗಳಿವೆ; ಅವುಗಳ ವಿವಿಧ ರೀತಿಯ ವರ್ಗೀಕರಣಗಳ ನಿಯಮಗಳು ಮತ್ತು ಮಾನದಂಡಗಳೇನು; (ಜಿಲ್ಲಾವಾರು ವಿವರ ನೀಡುವುದು) | ರಾಜ್ಯದಲ್ಲಿ ಅಂತ್ಯೋದಯ ಅನ್ನ, ಆದ್ಯತಾ ಪಡಿತರ (ಬಿಪಿಎಲ್) ಚೀಟಿ ಹಾಗೂ ಆದ್ಯತೇತರ ಪಡಿತರ ಚೀಟಿಗಳು ಚಾಲ್ತಿಯಲ್ಲಿರುತ್ತದೆ. ಈ ಪಡಿತರ ಚೀಟಿಗಳ ಜಿಲ್ಲಾವಾರು ವಿವರಗಳನ್ನು ಅನುಬಂಧ -1 ರಲ್ಲಿ ಒದಗಿಸಲಾಗಿದೆ.<br><br>1) **ಅಂತ್ಯೋದಯ ಅನ್ನ ಯೋಜನೆಗೆ -** ಭೂರಹಿತ ಕೃಷಿ ಕಾರ್ಮಿಕರು, ಅಂಚಿನ ಕೃಷಿಕರು, ಗ್ರಾಮೀಣ ಕುಶಲ ಕರ್ಮಿಗಳು ಅಂದರೆ ಮಡಿಕೆ ಮಾಡುವವರು ಚರ್ಮಕಾರರು, ನೇಕಾರರು, ಕಮ್ಮಾರರು, ಬಡಿಗಿಗಳು, ಕೊಳಚೆ ನಿವಾಸಿಗಳು ಮತ್ತು ವಿಧವೆಯರು ಮುಖ್ಯಸ್ಥರಾಗಿರುವ ಅಥವಾ ಸಂಪೂರ್ಣ ಅನಾರೋಗ್ಯಕ್ಕೆ ಒಳಗಾಗಿರುವ ವ್ಯಕ್ತಿಗಳು ಅಥವಾ ವಿಶೇಷ ಚೇತನರು ಅಥವಾ 60 ವರ್ಷ ತುಂಬಿದ ವ್ಯಕ್ತಿಗಳು ಅಥವಾ ನಿರ್ದಿಷ್ಟ ಜೀವನೋಪಾಯ ಮಾರ್ಗೋಪಾಯವಿಲ್ಲದ ಅಥವಾ ಸಾಮಾಜಿಕ ಬೆಂಬಲವಿಲ್ಲದ ಕುಟುಂಬಗಳಲ್ಲಿನ ಬಡವರಲ್ಲಿ ಅತಿ ಬಡವರಿಗೆ ಹಾಗೂ ಒಬ್ಬರೇ ಮಹಿಳೆಯರು ಅಥವಾ ಪುರುಷರ ಕುಟುಂಬಗಳು ಅಥವಾ ಎಲ್ಲಾ ಪ್ರಾಚೀನ/ಆದಿಮ ಬುಡಕಟ್ಟು ಕುಟುಂಬಗಳು ಮತ್ತು ಎಚ್‌ಐವಿ/ಏಡ್ಸ್ ರೋಗ ಪೀಡಿತರಿಗೆ ಅಂತ್ಯೋದಯ ಅನ್ನ ಪಡಿತರ ಚೀಟಿಗಳನ್ನು ನೀಡಲಾಗುತ್ತಿದೆ. |

| | | |
|---|---|---|
| | | 2) ರಾಜ್ಯದಲ್ಲಿ ಆದ್ಯತಾ ಪಡಿತರ (ಬಿಪಿಎಲ್) ಚೀಟಿಗಳನ್ನು ಪಡೆಯುವ ಬಗ್ಗೆ ಈ ಕೆಳಕಂಡ (ಅನರ್ಹತೆಯನ್ನಾಧರಿಸಿ ಹೊರಗಿಡುವ) ಮಾನದಂಡಗಳನ್ನು ಜಾರಿಯಲ್ಲಿರುತ್ತವೆ.<br>• ವೇತನವನ್ನು ಗಣನೆಗೆ ತೆಗೆದುಕೊಳ್ಳದೆ ಎಲ್ಲಾ ಖಾಯಂ ನೌಕರರು ಅಂದರೆ ಸರ್ಕಾರದ ಅಥವಾ ಸರ್ಕಾರದಿಂದ ಅನುದಾನವನ್ನು ಪಡೆಯುತ್ತಿರುವ ಸಂಸ್ಥೆಗಳು ಅಥವಾ ಸರ್ಕಾರಿ<br>• ಪ್ರಾಯೋಜಿತ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳು/ಮಂಡಳಿಗಳು/ ನಿಗಮಗಳು/ಸ್ವಾಯತ್ತ ಸಂಸ್ಥೆಗಳು ಇತ್ಯಾದಿ ಒಳಗೊಂಡಂತೆ ಆದಾಯ ತೆರಿಗೆ/ ಸೇವಾ ತೆರಿಗೆ/ ವ್ಯಾಟ್/ವೃತ್ತಿ ತೆರಿಗೆ ಪಾವತಿಸುವ ಎಲ್ಲಾ ಕುಟುಂಬಗಳು.<br>• ಗ್ರಾಮೀಣ ಪ್ರದೇಶಗಲಲ್ಲಿ 03 ಹೆಕ್ಟರ್ ಒಣಭೂಮಿ ಅಥವಾ ತತ್ಸಮಾನ ನೀರಾವರಿ ಭೂಮಿ ಹೊಂದಿರುವ ಕುಟುಂಬಗಳು ಅಥವಾ ಗ್ರಾಮೀಣ ಪ್ರದೇಶವನ್ನು ಹೊರತುಪಡಿಸಿ ನಗರ ಪ್ರದೇಶಗಳಲ್ಲಿ 1000 ಚದರ ಅಡಿಗಿಂತಲೂ ಹೆಚ್ಚಿನ ವಿಸ್ತೀರ್ಣದ ಪಕ್ಕಾ ಮನೆಯನ್ನು ಸ್ವಂತವಾಗಿ ಹೊಂದಿರುವ ಕುಟುಂಬಗಳು.<br>• ಜೀವನೋಪಾಯಕ್ಕಾಗಿ ಸ್ವತಃ ಓಡಿಸುವ ಒಂದು ವಾಣಿಜ್ಯ ವಾಹನವನ್ನು ಅಂದರೆ ಟ್ರಾಕ್ಟರ್, ಮ್ಯಾಕ್ಸಿಕ್ಯಾಬ್, ಟ್ಯಾಕ್ಸಿ ಇತ್ಯಾದಿಗಳನ್ನು ಹೊಂದಿದ ಕುಟುಂಬವನ್ನು ಹೊರತುಪಡಿಸಿ ನಾಲ್ಕು ಚಕ್ರದ ವಾಹನಗಳನ್ನು ಹೊಂದಿರುವ ಎಲ್ಲಾ ಕುಟುಂಬಗಳು.<br>• ಕುಟುಂಬದ ವಾರ್ಷಿಕ ಆದಾಯವು ರೂ. 1.20 ಲಕ್ಷಗಳಿಗಿಂತಲೂ ಹೆಚ್ಚು ಇರುವ ಕುಟುಂಬಗಳು.<br><br>3) ಮೇಲಿನ ಅಂತ್ಯೋದಯ, ಆದ್ಯತಾ ವರ್ಗಗಳನ್ನು ಹೊರತುಪಡಿಸಿದಲ್ಲಿ, ಉಳಿಯುವ ಪಡಿತರ ಚೀಟಿಗಳು ಆದ್ಯತೇತರ (NPHH) ಪಡಿತರ ಚೀಟಿಗಳಾಗುತ್ತವೆ. |

| | | |
|---|---|---|
| ಆ | ರಾಜ್ಯದಲ್ಲಿ ಎಷ್ಟು ಕುಟುಂಬಗಳು ತಮ್ಮ ಪಡಿತರ ಚೀಟಿಯ ವಿಧವನ್ನು ಬದಲಾಯಿಸಲು ಅರ್ಜಿ ಸಲ್ಲಿಸಿದ್ದಾರೆ; ಅದಕ್ಕೆ ಕಾರಣವೇನು; (ವಿವರ ನೀಡುವುದು) | ರಾಜ್ಯದಲ್ಲಿ ದಿನಾಂಕ: 01.04.2023 ರಿಂದ 21.11.2023 ರ ವರೆಗೆ ಪಡಿತರ ಚೀಟಿ ತಿದ್ದುಪಡಿಗೆ ಸ್ವೀಕರಿಸಿದ ಅರ್ಜಿಗಳ ಸಂಖ್ಯೆ: 16,79,604. (ಜಿಲ್ಲಾವಾರು ಮಾಹಿತಿ ಅನುಬಂಧ-2 ರಲ್ಲಿ ಒದಗಿಸಲಾಗಿದೆ.) |
| ಇ | ಪಡಿತರ ಚೀಟಿಯ ವಿಧ ಬದಲಾವಣೆ, ಹೆಸರು ತಿದ್ದುಪಡಿ, ಮನೆಯ ಯಜಮಾನರ ಬದಲಾವಣೆ, ಇತ್ಯಾದಿಗಳನ್ನು ಆನ್‌ಲೈನ್ ಮೂಲಕವೇ ಮಾಡಬೇಕಿದ್ದು ತಾಂತ್ರಿಕ ಕಾರಣಗಳಿಗಾಗಿ ಬದಲಾವಣೆ ಸಾಧ್ಯವಾಗದೆ ಹಲವು ಅಭಿವೃದ್ಧಿ ಯೋಜನೆಗಳು, ವಿವಿಧ ರೀತಿಯ ಫಲಾನುಭವಿಗಳಾಗಲು, ಶುಲ್ಕ ರಿಯಾಯಿತಿ ಪಡೆಯಲು, ವಿದ್ಯಾರ್ಥಿ ವೇತನ ಅರ್ಜಿ ಸಲ್ಲಿಸಲು, ಅಗತ್ಯ ದಾಖಲೆ ಪಡೆಯಲು/ ಸರಿಪಡಿಸಲು ಸಾಧ್ಯವಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಆಹಾರ ದತ್ತಾಂಶವನ್ನು ನಿರ್ವಹಿಸುತ್ತಿರುವ ಸರ್ವರ್‌ಗಳಿಂದ ಮತ್ತು ಆಹಾರ ಅಪ್ಲಿಕೇಶನ್ ನಿಂದ ಕೇಂದ್ರ ಸರ್ಕಾರಕ್ಕೆ ಪ್ರತಿ ತಿಂಗಳು ಪಡಿತರ ಚೀಟಿಗಳ ವಿವರ ಮತ್ತು ವಿತರಣಾ ಡೇಟಾವನ್ನು ಆನ್‌ಲೈನ್ ಮುಖಾಂತರ ಸಲ್ಲಿಸಲಾಗುತ್ತಿದೆ. ಇದರೊಂದಿಗೆ ಪ್ರತಿ ಮಾಹೆ ಆನ್‌ಲೈನ್ ಮುಖಾಂತರ ಪಡಿತರ ಹಂಚಿಕೆಯನ್ನು ಜನರೇಟ್ ಮಾಡಲು ಸರ್ವರ್ ಬಳಕೆಯಾಗುತ್ತಿದೆ. ತದನಂತರ ಪ್ರತಿ ಮಾಹೆಯ ಪಡಿತರ ವಿತರಣೆಯ ಪೊಸ್ (Point of Sale) ಮುಖಾಂತರ ಮಾಡಲಾಗುತ್ತಿದ್ದು, ಇದಕ್ಕಾಗಿ ಸರ್ವರ್ ಬಳಕೆಯಾಗುತ್ತಿದೆ. ಈ ಕಾರಣಗಳಿಂದಾಗಿ ಸರ್ವರ್ ಮೇಲೆ ಹೆಚ್ಚಿನ ಒತ್ತಡ ಇರುತ್ತದೆ. ಆದಾಗ್ಯೂ ಪ್ರತಿ ಮಾಹೆ 1 ರಿಂದ 10 ನೇ ತಾರೀಖಿನವರೆಗೆ ಪಡಿತರ ಚೀಟಿ ತಿದ್ದುಪಡಿಗೆ ಅವಕಾಶ ಕಲ್ಪಿಸಲಾಗಿರುತ್ತದೆ.<br><br>ಪ್ರಸ್ತುತ ಪ್ರತಿ ಮಾಹೆಯ ದಿನಾಂಕ 17 ರಿಂದ ದಿನಾಂಕ 25 ರವರೆಗೆ ಸರ್ವರ್ ಮತ್ತು AHARA ಅಪ್ಲಿಕೇಶನ್ ಅನ್ನು DBT ಅನ್ನಭಾಗ್ಯ ಯೋಜನೆಗೆ ಸಹ ಉಪಯೋಗಿಸಿಕೊಳ್ಳಲಾಗುತ್ತಿದೆ. ಇದರಿಂದ ತಿಂಗಳ 20 ರಿಂದ 30 ರವರೆಗೆ ಸರ್ವರ್ ಗಳ ಮೇಲೆ ಹೆಚ್ಚಿನ ಒತ್ತಡ ಬೀಳುತ್ತಿರುವುದರಿಂದ ಪಡಿತರ ಚೀಟಿ ತಿದ್ದುಪಡಿಗೆ ನಿರಂತರವಾಗಿ ಅರ್ಜಿ ಸಲ್ಲಿಸಲು ಅವಕಾಶ ನೀಡುವುದು ಕಷ್ಟ ಸಾಧ್ಯವಾಗುತ್ತಿದೆ.<br>ರಾಜ್ಯದಲ್ಲಿ ಪ್ರಸ್ತುತ ಬೆಂಗಳೂರು, ಮೈಸೂರು, ಕಲಬುರಗಿ, |
| ಈ | ಅನೇಕ ಸಂಧರ್ಭಗಳಲ್ಲಿ ಆಹಾರ ಇಲಾಖೆಯ ತಂತ್ರಾಂಶದಲ್ಲಿ ವಿವಿಧ ತಿದ್ದುಪಡಿಗೆ ಅವಕಾಶವನ್ನು ಅತೀ ಕಡಿಮೆ ಅವಧಿಗೆ ಅಂದರೆ 1 ಅಥವಾ 2 ದಿನಗಳ ಅವಕಾಶ ನೀಡಿ ಎಲ್ಲರೂ ಸೇವಾ ಸಂಸ್ಥೆಗಳಿಗೆ ಭೇಟಿ ನೀಡಿ ವಿವಿಧ ರೀತಿಯ ತಿದ್ದುಪಡಿಗೆ ಪ್ರಯತ್ನಿಸಿದಾಗ ಸರ್ವರ್ ವಿಫಲಗೊಂಡು ಯಾರ ಕೆಲಸಗಳು ಪೂರ್ಣವಾಗದಿರಲು ಪ್ರಕರಣಗಳು ಉದ್ಭವಿಸಿರುವ ಹಿನ್ನೆಲೆಯಲ್ಲಿ ಸರ್ಕಾರ ಪಡಿತರ ಚೀಟಿ ತಂತ್ರಾಂಶವನ್ನು ನಿಯಮಿತವಾಗಿ ತೆರೆದಿಟ್ಟು, ಸೂಕ್ತ ಕಾರಣಗಳಿಗಾಗಿ ತಿದ್ದುಪಡಿ ಮಾಡಲು ತಂತ್ರಾಂಶದಲ್ಲಿ ಸೂಕ್ತ ಸುಧಾರಣೆ ತರಲು ಉದ್ದೇಶಿಸಿದೆಯೇ; (ವಿವರ ನೀಡುವುದು) | |

| | | |
|---|---|---|
| | | ಪ್ರದೇಶಗಳಿಗೆ 3 ಸರ್ವರ್‌ಗಳನ್ನುಬಳಸಲಾಗುತ್ತಿದೆ. ಈಗಿನ ಸರ್ವರ್‌ಗಳು ಹೆಚ್ಚಿನ ಒತ್ತಡ ಹೊರಲು ಸಾಧ್ಯವಾಗದ ಕಾರಣದಿಂದ ಉಧ್ಬವಿಸಿದ ಈ ಸಮಸ್ಯೆಯನ್ನು ನಿವಾರಿಸಲು ಆಹಾರ ತಂತ್ರಾಂಶದ ಸರ್ವರ್‌ಗಳನ್ನು ಎನ್. ಐ. ಸಿ.ಯಿಂದ ಕೆ.ಎಸ್.ಡಿ.ಸಿಗೆ ವರ್ಗಾಯಿಸಲಾಗುತ್ತಿದೆ. ಅದರಂತೆ ಈ ತಂತ್ರಾಂಶದ Migration ಕಾರ್ಯವು ಪ್ರಗತಿ ಯಲ್ಲಿರುತ್ತದೆ. ಎನ್. ಐ. ಸಿ ಯಿಂದ ಕೆ.ಎಸ್.ಡಿ.ಸಿ'ಗೆ Migration ಕಾರ್ಯ ಪೂರ್ಣಗೊಂಡ ನಂತರ ಪಡಿತರ ಚೀಟಿಯಲ್ಲಿನ ಹೆಸರು ಸೇರ್ಪಡೆ/ತಿದ್ದುಪಡಿ ಬಗ್ಗೆ ನಿರಂತರವಾಗಿ ಅವಕಾಶ ಕಲ್ಪಿಸಲು ಸಾಧ್ಯವಾಗುತ್ತದೆ.<br><br>ಆದಾಗ್ಯೂ ಇಲಾಖೆಯಿಂದ ಕಳೆದ 6 ತಿಂಗಳಿನಿಂದ ಸ್ವೀಕೃತವಾದ 16,79,604 ಪಡಿತರ ಚೀಟಿ ತಿದ್ದುಪಡಿ ಅರ್ಜಿಗಳ ಪೈಕಿ ಈಗಾಗಲೇ 14,37,720 ಅರ್ಜಿಗಳನ್ನು ವಿಲೇಗೊಳಿಸಲಾಗಿರುತ್ತದೆ. |
| ಉ | ಪಡಿತರ ಚೀಟಿ ಹಾಗೂ ಪಡಿತರ ಸಾಮಾಗ್ರಿ ದುರುಪಯೋಗ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿದೆಯೇ; ಪಡಿತರ ಚೀಟಿಯ ದುರುಪಯೋಗವನ್ನು ಮತ್ತು ಪಡಿತರ ಸಾಮಾಗ್ರಿಯನ್ನು ಮಾರಾಟ ಮಾಡುವ ಜಾಲವನ್ನು ಭೇದಿಸಲು ಸರ್ಕಾರ ಕೈಗೊಂಡ ಕ್ರಮಗಳೇನು? (ವಿವರ ನೀಡುವುದು) | ಪಡಿತರ ಚೀಟಿ ಹಾಗೂ ಪಡಿತರ ಸಾಮಾಗ್ರಿ ದುರುಪಯೋಗ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಇದನ್ನು ತಡೆಗಟ್ಟಲು ಈ ಕ್ರಮಗಳನ್ನು ವಹಿಸಲಾಗಿರುತ್ತದೆ.<br><br>• ಪಡಿತರ ಚೀಟಿಯ ದುರುಪಯೋಗವನ್ನು ತಡೆಗಟ್ಟಲು ರಾಜ್ಯ ಸರ್ಕಾರವು ರೂಪಿಸಿರುವ ಮಾನದಂಡಗಳಿಗೆ ವಿರುದ್ಧವಾಗಿ ಅಂತ್ಯೋದಯ ಅನ್ನ ಮತ್ತು ಆದ್ಯತಾ ಪಡಿತರ ಚೀಟಿಗಳನ್ನು ಪಡೆದುಕೊಂಡವರನ್ನು ಪತ್ತೆ ಹಚ್ಚುವ ಕೆಲಸವನ್ನು ನಿರಂತರವಾಗಿ ಮಾಡಲಾಗುತ್ತಿದೆ.<br><br>• ಈ ಹಿನ್ನೆಲೆಯಲ್ಲಿ ಇಲಾಖೆಯು ರಾಜ್ಯ ಮತ್ತು ಕೇಂದ್ರ ಸರ್ಕಾರದ ವಿವಿಧ ಇಲಾಖೆಗಳ ಜೊತೆ ಮಾಹಿತಿ ವಿನಿಮಯ ಮಾಡಿಕೊಂಡು ಆದಾಯ ತೆರಿಗೆ ಪಾವತಿದಾರರು, ಜಿ.ಎಸ್.ಟಿ ಮತ್ತು ವೃತ್ತಿತೆರಿಗೆಪಾವತಿದಾರರು, ಸರ್ಕಾರಿ ನೌಕರರು ಮತ್ತು ನಿವೃತ್ತ ನೌಕರರು, ರೂ. 1.20 ಲಕ್ಷಕ್ಕಿಂತ ಹೆಚ್ಚು |

| | | |
|---|---|---|
| | | ವಾರ್ಷಿಕ ಆದಾಯ ಹೊಂದಿರುವವರು ಹಾಗೂ 3 ಹೆಕ್ಟರ್‌ಗಿಂತ ಹೆಚ್ಚು ಜಮೀನು ಹೊಂದಿರುವವರ ಮಾಹಿತಿಯನ್ನು ಪಡೆದು ಈ ಕುಟುಂಬಗಳುಹೊಂದಿರುವ ಪಡಿತರ ಚೀಟಿಗಳ ಜೊತೆ ತಾಳೆ ಮಾಡಿ ಅಂತವರು ಹೊಂದಿದ್ದ ಅಂತ್ಯೋದಯ ಅನ್ನ ಮತ್ತು ಆದ್ಯತಾ ಪಡಿತರ ಚೀಟಿಗಳನ್ನು ಆದ್ಯತೇತರ ಪಡಿತರ ಚೀಟಿಗಳಾಗಿ ಪರಿವರ್ತಿಸಿ ಹಾಗೂ ಅನರ್ಹರಿಂದ 2020-21ನೇ ಸಾಲಿನಿಂದ ಇಲ್ಲಿಯವರೆಗೂ ಒಟ್ಟು ರೂ. 13,56,88,274 / - ದಂಡ ವಸೂಲಿ ಮಾಡಲಾಗಿದೆ.<br>• ಪಡಿತರ ಸಾಮಾಗ್ರಿಯನ್ನು ತಡೆಗಟ್ಟಲು ಎಲ್ಲಾ ಜಿಲ್ಲೆಗಳ ಜಂಟಿ/ಉಪ ನಿರ್ದೇಶಕರುಗಳಿಗೆ ಕಾಲಕಾಲಕ್ಕೆ ತನಿಖೆಗಳನ್ನು ನಡೆಸಿ / ಅನಿರೀಕ್ಷಿತ ದಾಳಿಗಳನ್ನು ನಡೆಸಿ ಪಡಿತರ ವಸ್ತುಗಳ ದುರುಪಯೋಗವನ್ನು ತಡೆಗಟ್ಟಲು ಕ್ರಮ ವಹಿಸಲಾಗಿದೆ. ಈ ಸಂಬಂಧ 2023-24ನೇ ಸಾಲಿನಲ್ಲಿ ಒಟ್ಟು 251 ದಾಳಿಗಳನ್ನು ನಡೆಸಿದ್ದು, 232 ಎಫ್.ಐ.ಆರ್ ಗಳನ್ನು ದಾಖಲಿಸಲಾಗಿರುತ್ತದೆ. |

**ಸಂಖ್ಯೆ ಆನಾಸ 275 ಡಿಆರ್‌ಎ 2023**

(ಕೆ.ಹೆಚ್. ಮುನಿಯಪ್ಪ)

ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ

ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ

ಇಲಾಖಾ ಸಚಿವರು

## ಶ್ರೀ ಮಂಜುನಾಥ್ ಭಂಡಾರಿ ರವರ ಪ್ರಶ್ನೆ ಸಂಖ್ಯೆ: 655
## ಅನುಬಂಧ - 01

| Sl. No. | DISTRICT | AAY RCs | PHH RCs | NPHH RCs | TOTAL RCs |
|---|---|---|---|---|---|
| 1 | BAGALKOTE | 45989 | 370598 | 63480 | **480067** |
| 2 | BALLARI | 25977 | 273722 | 43744 | **343443** |
| 3 | BANGALORE EAST | 2463 | 80500 | 85222 | **168185** |
| 4 | BANGALORE NORTH | 2611 | 112088 | 68010 | **182709** |
| 5 | BANGALORE SOUTH | 5520 | 112586 | 75018 | **193124** |
| 6 | BANGALORE WEST | 4466 | 188424 | 106094 | **298984** |
| 7 | BELAGAVI | 68385 | 1078386 | 323032 | **1469803** |
| 8 | BENGALURU | 12745 | 493761 | 103172 | **609678** |
| 9 | BENGALURU RURAL | 14338 | 215991 | 23122 | **253451** |
| 10 | BIDAR | 40010 | 308776 | 53622 | **402408** |
| 11 | CHAMARAJANAGARA | 35659 | 253602 | 14728 | **303989** |
| 12 | CHIKKABALLAPURA | 28398 | 279865 | 19269 | **327532** |
| 13 | CHIKKAMAGALURU | 22226 | 241041 | 64835 | **328102** |
| 14 | CHITRADURGA | 42191 | 359273 | 44414 | **445878** |
| 15 | DAKSHINA KANNADA | 23051 | 255165 | 173609 | **451825** |
| 16 | DAVANAGERE | 45521 | 328919 | 45821 | **420261** |
| 17 | DHARWAR | 29731 | 354854 | 95935 | **480520** |
| 18 | GADAG | 28464 | 227312 | 38645 | **294421** |
| 19 | HASSAN | 23382 | 428432 | 43241 | **495055** |
| 20 | HAVERI | 46890 | 345216 | 56233 | **448339** |
| 21 | KALABURAGI | 62625 | 507166 | 115600 | **685391** |
| 22 | KODAGU | 9735 | 101262 | 37187 | **148184** |
| 23 | KOLAR | 29734 | 310681 | 35904 | **376319** |
| 24 | KOPPAL | 37418 | 289505 | 27352 | **354275** |
| 25 | MANDYA | 34358 | 441974 | 57451 | **533783** |
| 26 | MYSURU | 50371 | 659242 | 110965 | **820578** |
| 27 | RAICHUR | 52250 | 400857 | 42551 | **495658** |
| 28 | RAMANAGARA | 18931 | 276360 | 17812 | **313103** |
| 29 | SHIVAMOGGA | 37810 | 352460 | 103288 | **493558** |
| 30 | TUMAKURU | 49634 | 607817 | 66445 | **723896** |
| 31 | UDUPI | 28248 | 168301 | 115128 | **311677** |
| 32 | UTTARA KANNADA | 16209 | 293328 | 90179 | **399716** |
| 33 | VIJAYANAGARA | 40553 | 258605 | 33319 | **332477** |
| 34 | VIJAYAPURA | 41748 | 464075 | 86885 | **592708** |
| 35 | YADGIR | 29327 | 240197 | 17587 | **287111** |
| | | | | | |
| **TOTAL** | | **1086968** | **11680341** | **2498899** | **15266208** |

ಅಪರ ನಿರ್ದೇಶಕರು (ಐಟಿ)
ಆಹಾರ, ನಾಗರಿಕ ಸರಬರಾಜು ಮತ್ತು
ಗ್ರಾಹಕರ ವ್ಯವಹಾರಗಳ ಇಲಾಖೆ

ಶ್ರೀ.ಮಂಜುನಾಥ್ ಭಂಡಾರಿ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 655

ಅನುಬಂಧ-02

| Sl. No. | District Name | GSC Applications Received Count | | | | GSC Applications Approved Count | | | |
|---|---|---|---|---|---|---|---|---|---|
| | | AAY | PHH | TOTAL AAY+PHH | NPHH | AAY | PHH | TOTAL AAY+PHH | NPHH |
| 1 | BAGALKOTE | 5,586 | 43,593 | 49,179 | 3,339 | 21,553 | 21,553 | 43,106 | 21,553 |
| 2 | BALLARI | 4,200 | 36,909 | 41,109 | 1,365 | 11,782 | 11,782 | 23,564 | 11,782 |
| 3 | BANGALORE EAST | 360 | 10,065 | 10,425 | 1,677 | 3,765 | 3,765 | 7,530 | 3,765 |
| 4 | BANGALORE NORTH | 573 | 20,115 | 20,688 | 2,880 | 5,766 | 5,766 | 11,532 | 5,766 |
| 5 | BANGALORE SOUTH | 912 | 17,196 | 18,108 | 2,472 | 5,328 | 5,328 | 10,656 | 5,328 |
| 6 | BANGALORE WEST | 882 | 29,775 | 30,657 | 3,105 | 8,741 | 8,741 | 17,482 | 8,741 |
| 7 | BELAGAVI | 8,013 | 1,40,418 | 1,48,431 | 9,171 | 37,875 | 37,875 | 75,750 | 37,875 |
| 8 | BENGALURU | 2,412 | 78,525 | 80,937 | 4,221 | 27,905 | 27,905 | 55,810 | 27,905 |
| 9 | BENGALURU RURAL | 3,774 | 49,239 | 53,013 | 2,235 | 16,963 | 16,963 | 33,926 | 16,963 |
| 10 | BIDAR | 4,482 | 38,730 | 43,212 | 2,208 | 18,156 | 18,156 | 36,312 | 18,156 |
| 11 | CHAMARAJANAGARA | 1,965 | 13,368 | 15,333 | 876 | 3,728 | 3,728 | 7,456 | 3,728 |
| 12 | CHIKKABALLAPURA | 5,382 | 42,483 | 47,865 | 1,770 | 11,630 | 11,630 | 23,260 | 11,630 |
| 13 | CHIKKAMAGALURU | 1,809 | 17,964 | 19,773 | 3,585 | 5,703 | 5,703 | 11,406 | 5,703 |
| 14 | CHITRADURGA | 4,602 | 39,681 | 44,283 | 2,586 | 11,114 | 11,114 | 22,228 | 11,114 |
| 15 | DAKSHINA KANNADA | 2,559 | 26,649 | 29,208 | 18,705 | 12,399 | 12,399 | 24,798 | 12,399 |
| 16 | DAVANAGERE | 6,021 | 41,895 | 47,916 | 2,277 | 14,001 | 14,001 | 28,002 | 14,001 |
| 17 | DHARWAR | 2,811 | 31,983 | 34,794 | 2,634 | 13,406 | 13,406 | 26,812 | 13,406 |
| 18 | GADAG | 3,612 | 29,253 | 32,865 | 1,851 | 11,612 | 11,612 | 23,224 | 11,612 |
| 19 | HASSAN | 1,692 | 28,164 | 29,856 | 2,607 | 8,799 | 8,799 | 17,598 | 8,799 |
| 20 | HAVERI | 5,520 | 43,554 | 49,074 | 2,787 | 12,022 | 12,022 | 24,044 | 12,022 |
| 21 | KALABURAGI | 9,063 | 77,100 | 86,163 | 4,692 | 26,169 | 26,169 | 52,338 | 26,169 |
| 22 | KODAGU | 444 | 6,381 | 6,825 | 1,467 | 2,956 | 2,956 | 5,912 | 2,956 |
| 23 | KOLAR | 3,552 | 31,506 | 35,058 | 1,644 | 9,094 | 9,094 | 18,188 | 9,094 |
| 24 | KOPPAL | 6,576 | 52,125 | 58,701 | 2,673 | 17,837 | 17,837 | 35,674 | 17,837 |
| 25 | MANDYA | 3,168 | 35,136 | 38,304 | 2,430 | 13,468 | 13,468 | 26,936 | 13,468 |
| 26 | MYSURU | 3,144 | 36,564 | 39,708 | 3,426 | 14,607 | 14,607 | 29,214 | 14,607 |
| 27 | RAICHUR | 9,210 | 68,868 | 78,078 | 2,634 | 17,376 | 17,376 | 34,752 | 17,376 |
| 28 | RAMANAGARA | 1,902 | 23,412 | 25,314 | 1,131 | 7,611 | 7,611 | 15,222 | 7,611 |
| 29 | SHIVAMOGGA | 5,739 | 46,926 | 52,665 | 8,580 | 18,493 | 18,493 | 36,986 | 18,493 |
| 30 | TUMAKURU | 8,259 | 87,966 | 96,225 | 3,990 | 28,885 | 28,885 | 57,770 | 28,885 |
| 31 | UDUPI | 3,372 | 17,595 | 20,967 | 8,265 | 9,969 | 9,969 | 19,938 | 9,969 |
| 32 | UTTARA KANNADA | 1,281 | 25,470 | 26,751 | 6,492 | 9,150 | 9,150 | 18,300 | 9,150 |
| 33 | VIJAYANAGARA | 5,079 | 31,236 | 36,315 | 1,569 | 9,517 | 9,517 | 19,034 | 9,517 |
| 34 | VIJAYAPURA | 4,620 | 55,008 | 59,628 | 3,249 | 20,258 | 20,258 | 40,516 | 20,258 |
| 35 | YADGIR | 5,112 | 40,728 | 45,840 | 1,743 | 11,602 | 11,602 | 23,204 | 11,602 |
| | **TOTAL** | **1,37,688** | **14,15,580** | **15,53,268** | **1,26,336** | **4,79,240** | **4,79,240** | **9,58,480** | **4,79,240** |

ಅಪರ ನಿರ್ದೇಶಕರು (ಐಟಿ)